# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 1077 |
| ಉತ್ತರಿಸಬೇಕಾದ ದಿನಾಂಕ | : | 23.02.2024 |
| ಸದಸ್ಯರ ಹೆಸರು | : | ಶ್ರೀ ಎಂ. ನಾಗರಾಜು (ವಿಧಾನಸಭೆಯಿಂದ ಚುನಾಯಿತರಾದವರು) |
| ಉತ್ತರಿಸುವ ಸಚಿವರು | : | ಮಾನ್ಯ ಪರಿಶಿಷ್ಟ ಪಂಗಡಗಳ ಕಲ್ಯಾಣ, ಯುವ ಸಬಲೀಕರಣ ಮತ್ತು ಕ್ರೀಡಾ ಸಚಿವರು. |

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ಬೆಂಗಳೂರಿನಲ್ಲಿರುವ ಕಂಠೀರವ ಕ್ರೀಡಾಂಗಣದಲ್ಲಿರುವ ಒಳಾಂಗಣ ಕ್ರೀಡಾಂಗಣವನ್ನು ಅಭಿವೃದ್ಧಿ ಪಡಿಸಲು ಕೈಗೊಂಡಿರುವ ಕ್ರಮಗಳು ಏನು; | ಶ್ರೀ ಕಂಠೀರವ ಒಳಾಂಗಣ ಕ್ರೀಡಾಂಗಣವನ್ನು ಅಂತರರಾಷ್ಟ್ರೀಯ ಮಟ್ಟದ ಒಳಾಂಗಣ ಕ್ರೀಡಾಂಗಣವನ್ನಾಗಿ ಅಭಿವೃದ್ಧಿಪಡಿಸಲಾಗಿದೆ.<br><br>• ಈ ಕ್ರೀಡಾಂಗಣದಲ್ಲಿ ಅಂತರರಾಷ್ಟ್ರೀಯ ಮಟ್ಟದ ಬಾಸ್ಕೆಟ್‌ಬಾಲ್, ವಾಲಿಬಾಲ್, ಕಬಡ್ಡಿ, ಫೆನ್ಸಿಂಗ್, ಜಿಮ್ನಾಸ್ಟಿಕ್ ಕ್ರೀಡೆಗಳನ್ನು ಆಯೋಜಿಸಲು ಕ್ರೀಡಾ ಸೌಕರ್ಯಗಳನ್ನು ಕಲ್ಪಿಸಲಾಗಿದೆ.<br>• ಅಂತರರಾಷ್ಟ್ರೀಯ ಮಟ್ಟದ ಕ್ರೀಡಾಪಟುಗಳಿಗಾಗಿ ವಿಶ್ರಾಂತಿ ಕೊಠಡಿಗಳನ್ನು ಅಭಿವೃದ್ಧಿಪಡಿಸಲಾಗಿದೆ.<br>• ಅಂತರರಾಷ್ಟ್ರೀಯ ಮಟ್ಟದ ಕ್ರೀಡಾಕೂಟಗಳಿಗೆ ಅವಶ್ಯಕವಾದ ಹೊನಲು ಬೆಳಕು ವ್ಯವಸ್ಥೆ ಸೃಜಿಸಲಾಗಿದೆ. |
| ಆ) | ಈ ಒಳಾಂಗಣ ಕ್ರೀಡಾಂಗಣವನ್ನು ಯಾವ ಯಾವ ಕಾರ್ಯಕ್ರಮಗಳಿಗೆ ಬಾಡಿಗೆಗೆ ನೀಡಲಾಗುವುದು; ಈ ಒಳಾಂಗಣ ಕ್ರೀಡಾಂಗಣದ 1 ದಿನದ ಬಾಡಿಗೆ ಎಷ್ಟು ಮತ್ತು ಈ ಒಳಾಂಗಣ ಕ್ರೀಡಾಂಗಣವನ್ನು ಬಾಡಿಗೆ ಪಡೆಯಲು ಯಾರನ್ನು ಸಂಪರ್ಕಿಸಬೇಕಾಗಿರುತ್ತದೆ; | • ಒಳಾಂಗಣ ಕ್ರೀಡಾಂಗಣವನ್ನು ವಾಣಿಜ್ಯ/ಕ್ರೀಡೇತರ ಚಟುವಟಿಕೆಗಳಿಗೆ ಬಳಸದೆ ಕೇವಲ ಕ್ರೀಡಾಕಾರ್ಯಕ್ರಮಗಳು ಕ್ರೀಡಾಚಟುವಟಿಕೆಗಳು, ಪಂದ್ಯಾವಳಿಗಳಿಗೆ ಹಾಗೂ ಮಾನ್ಯ ಮುಖ್ಯಮಂತ್ರಿಗಳು ಭಾಗವಹಿಸುವ ಸರ್ಕಾರಿ ಕಾರ್ಯಕ್ರಮಗಳಿಗೆ ಶ್ರೀ ಕಂಠೀರವ ಒಳಾಂಗಣ ಕ್ರೀಡಾಂಗಣವನ್ನು ಬಳಸಲಾಗುವುದು.<br><br>• ವಾಣಿಜ್ಯ /ಕ್ರೀಡೇತರ ಚಟುವಟಿಕೆಗಳಿಗೆ ಕ್ರೀಡಾಂಗಣವನ್ನು ನೀಡಲು ಅವಕಾಶವಿರುವುದಿಲ್ಲ.<br><br>• ಸರ್ಕಾರಿ ಆದೇಶ ಸಂಖ್ಯೆ:ಯುಸೇಇ 373 ಯುಸೇಕ್ರೀ 2017(ಭಾಗ-3), ಬೆಂಗಳೂರು, ದಿನಾಂಕ:23.07.2021 ರ ಸರ್ಕಾರಿ ಆದೇಶದನ್ವಯ ಶ್ರೀ ಕಂಠೀರವ ಒಳಾಂಗಣ ಕ್ರೀಡಾಂಗಣ ದಲ್ಲಿ ವಾಣಿಜ್ಯ ಮಾದರಿಯ ಪ್ರವೇಶ ಶುಲ್ಕ ಒಳಗೊಂಡ ಕ್ರೀಡಾ ಕಾರ್ಯಕ್ರಮಗಳಿಗೆ ಕಾರ್ಯಕ್ರಮದ ದಿನ ಒಂದಕ್ಕೆ ರೂ.10.00 ಲಕ್ಷ ಶುಲ್ಕ ನಿಗದಿಪಡಿಸಲಾಗಿದೆ.<br><br>• ಶ್ರೀ ಕಂಠೀರವ ಒಳಾಂಗಣ ಕ್ರೀಡಾಂಗಣವನ್ನು ಬಾಡಿಗೆ ಪಡೆಯಲು ಕಾರ್ಯದರ್ಶಿಗಳು, ಕ್ರೀಡಾಂಗಣ ವ್ಯವಸ್ಥಾಪಕ ಸಮಿತಿ, ಬೆಂಗಳೂರು / ಆಯುಕ್ತರು, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ, |

| | | |
|---|---|---|
| | | ನೃಪತುಂಗ ರಸ್ತೆ, ರಾಜ್ಯ ಯುವ ಕೇಂದ್ರ, ಬೆಂಗಳೂರು ಇವರನ್ನು ಸಂಪರ್ಕಿಸಬಹುದಾಗಿದೆ. |
| ಇ) | ರಾಜ್ಯದಲ್ಲಿ ಎಷ್ಟು ಕ್ರೀಡಾಂಗಣಗಳಿವೆ<br><br>ಮತ್ತು ಇದರ ನಿರ್ವಹಣೆಗೆ ಸರ್ಕಾರದಿಂದ ಬಿಡುಗಡೆಯಾಗುವ ಅನುದಾನ ಎಷ್ಟು;<br><br>ಅನುದಾನದ ಮಾಹಿತಿಯನ್ನು ಜಿಲ್ಲಾವಾರು ನೀಡುವುದು? | ಕರ್ನಾಟಕ ರಾಜ್ಯಾದ್ಯಂತ ಈಗಾಗಲೇ ನಿರ್ಮಿಸಿರುವ ಕ್ರೀಡಾಂಗಣಗಳ ವಿವರ ಈ ಕೆಳಕಂಡಂತಿದೆ:-<br><br>(see table below)<br><br>ಈ ಕ್ರೀಡಾಂಗಣಗಳ ನಿರ್ವಹಣೆಗಾಗಿ 2023-24ನೇ ಸಾಲಿನಲ್ಲಿ ರೂ 1500.00 ಲಕ್ಷಗಳನ್ನು ಹಂಚಿಕೆ ಮಾಡಿ, ಇಲ್ಲಿಯವರೆಗೂ ರೂ 1250.00 ಲಕ್ಷಗಳ ಅನುದಾನ ಬಿಡುಗಡೆಯಾಗಿರುತ್ತದೆ.<br>ಜಿಲ್ಲಾವಾರು ಅನುದಾನದ ಮಾಹಿತಿಯನ್ನು ಅನುಬಂಧದಲ್ಲಿ ಒದಗಿಸಿದೆ. |

| ಕ್ರ. ಸಂ | ಕ್ರೀಡಾಂಗಣಗಳ ವಿವರ | ಕ್ರೀಡಾಂಗಣ ಸಂಖ್ಯೆ |
|---|---|---|
| 1. | ಜಿಲ್ಲಾ ಕ್ರೀಡಾಂಗಣಗಳು | 29 |
| 2. | ತಾಲ್ಲೂಕು ಕ್ರೀಡಾಂಗಣಗಳು | 125 |
| 3. | ಒಳಾಂಗಣ ಕ್ರೀಡಾಂಗಣಗಳು | 60 |
| 4. | ಈಜುಕೊಳಗಳು | 34 |
| 5. | ಸಿಂಥೆಟಿಕ್ ಅಥ್ಲೆಟಿಕ್ ಟ್ರ್ಯಾಕ್ | 19 |
| 6. | ಸಿಂಥೆಟಿಕ್ ಹಾಕಿ ಟರ್ಫ್ | 08 |
| 7. | ಸಿಂಥೆಟಿಕ್ ಫುಟ್ಬಾಲ್ ಟರ್ಫ್ | 01 |

ಸಂಖ್ಯೆ: ವೈಎಸ್‌ಡಿ-ಇಬಿಬಿ/29/2024

( ಬಿ. ನಾಗೇಂದ್ರ )
ಪರಿಶಿಷ್ಟ ಪಂಗಡಗಳ ಕಲ್ಯಾಣ,
ಯುವ ಸಬಲೀಕರಣ ಮತ್ತು ಕ್ರೀಡಾ ಸಚಿವರು.

## <u>ಅನುಬಂಧ</u>

2023-24ನೇ ಸಾಲಿಗೆ ಕ್ರೀಡಾಂಗಣಗಳ ನಿರ್ವಹಣೆಗಾಗಿ ಬಿಡುಗಡೆಯಾಗಿರುವ ಅನುದಾನದ ವಿವರ (ಜಿಲ್ಲಾವಾರು ಮಾಹಿತಿ).

| ಕ್ರ.ಸಂ | ಜಿಲ್ಲೆಯ ಹೆಸರು | ಒಟ್ಟು ಬಿಡುಗಡೆ |
|---|---|---|
| 1 | ಬೆಂಗಳೂರು ನಗರ | 33,33,334 |
| 2 | ಬೆಂಗಳೂರು ಗ್ರಾಮಾಂತರ | 31,73,000 |
| 3 | ಚಿತ್ರದುರ್ಗ | 43,13,334 |
| 4 | ಕೋಲಾರ | 39,00,000 |
| 5 | ಶಿವಮೊಗ್ಗ | 53,51,666 |
| 6 | ತುಮಕೂರು | 48,00,000 |
| 7 | ದಾವಣಗೆರೆ | 45,77,000 |
| 8 | ರಾಮನಗರ | 22,27,334 |
| 9 | ಚಿಕ್ಕಬಳ್ಳಾಪುರ | 34,20,000 |
| 10 | ಮೈಸೂರು | 75,16,566 |
| 11 | ಚಿಕ್ಕಮಗಳೂರು | 31,53,334 |
| 12 | ದಕ್ಷಿಣ ಕನ್ನಡ | 52,33,334 |
| 13 | ಹಾಸನ | 41,41,334 |
| 14 | ಕೊಡಗು | 48,20,000 |
| 15 | ಮಂಡ್ಯ | 56,06,666 |
| 16 | ಚಾಮರಾಜನಗರ | 46,90,334 |
| 17 | ಉಡುಪಿ | 42,89,334 |
| 18 | ಬೆಳಗಾವಿ | 50,87,894 |
| 19 | ವಿಜಯಾಪುರ | 36,32,416 |
| 20 | ಧಾರವಾಡ | 40,66,666 |
| 21 | ಉತ್ತರ ಕನ್ನಡ | 33,16,666 |
| 22 | ಬಾಗಲಕೋಟೆ | 29,57,334 |
| 23 | ಗದಗ್ | 21,66,666 |
| 24 | ಹಾವೇರಿ | 50,40,000 |
| 25 | ಕಲಬುರಗಿ | 50,52,666 |
| 26 | ಬಳ್ಳಾರಿ | 30,06,666 |
| 27 | ಬೀದರ್ | 47,33,334 |
| 28 | ರಾಯಚೂರು | 32,75,456 |
| 29 | ಯಾದಗಿರಿ | 44,13,334 |
| 30 | ಕೊಪ್ಪಳ | 37,04,334 |
| | **ಒಟ್ಟು** | **12,50,00,000** |